# ಅದ್ಭುತ ಮಾರಿಷಸ್ !!!

ಕೇಸರಿಯ ಪ್ರವಾಸದ ಭಂಡಾರದಲ್ಲಿರುವ ಒಂದು ಅತ್ಯಂತ ಆಕರ್ಷಕ ಪ್ರವಾಸವೆಂದರೆ ಅತ್ಯದ್ಭುತ ಮಾರಿಷಸ್. ಹಿಂದೂ ಮಹಾಸಾಗರದಲ್ಲಿರುವ ಈ ಚಿಕ್ಕ ದ್ವೀಪ ದೇಶವನ್ನು ಸೂಕ್ತವಾಗಿ 'ಹಿಂದೂ ಮಹಾಸಾಗರದ ಮುತ್ತು' ಎಂದು ಕರೆಯುತ್ತಾರೆ. ಸುಂದರವಾದ ಮಾರಿಷಸ್, ಸಂಪೂರ್ಣವಾಗಿ ಹಸಿರಿನಿಂದ ಕಂಗೊಳಿಸುತ್ತಿರುವ, ನೀಲ ಸಾಗರದ ನೀರಿನಿಂದ ಎಲ್ಲಾ ಕಡೆಯಿಂದಲೂ ಸುತ್ತುವರೆಯಲ್ಪಟ್ಟ ಒಂದು ಸುಂದರ ಚಿಕ್ಕ ಸ್ಥಳ. ಪ್ರಪಂಚದ ಸಹಸ್ರಾರು ಪ್ರವಾಸಿಗರನ್ನು ಸೆಳೆಯುವ ಈ ಚಿಕ್ಕ ದ್ವೀಪ ದೇಶ, ಒಂದು ದೊಡ್ಡ ಅಗ್ನಿಪರ್ವತದ ಸ್ಫೋಟದಿಂದ ರಚನೆಯಾಗಿದೆ. ಈ ನೈಸರ್ಗಿಕ ದ್ವೀಪದ ಆಕರ್ಷಕ ಮತ್ತು ಅದ್ಭುತ ಪ್ರಕೃತಿಯ ಸೌಂದರ್ಯವನ್ನು ಸವಿಯಲು ಕೇಸರಿ 7–ದಿನ 6–ರಾತ್ರಿಯ 'ಮಾರಿಷಸ್' (ಎಮ್2) ಎನ್ನುವ ಪ್ರವಾಸವನ್ನು ಹೊಂದಿದೆ.

ಈ ಪ್ರವಾಸದ ಎಲ್ಲಾ 6 ದಿನಗಳಲ್ಲೂ ನಿಮ್ಮ ವಸತಿ ಒಂದೇ ಹೋಟೆಲ್‌ನಲ್ಲಿ ಇರುತ್ತದೆ. ಮಾರಿಷಸ್‌ನ ಪ್ರವಾಸವನ್ನು ನಾವು ಪ್ಯಾಂಪ್ಲೆಮೋಸೆಯ ರಾಯಲ್ ಬಟಾನಿಕಲ್ ಗಾರ್ಡನ್‌ನಿಂದ ಆರಂಭಿಸುತ್ತೇವೆ. ಈ ಗಾರ್ಡನ್‌ನ್ನು ಮಾರಿಷಸ್‌ನ ಪಿತಾಮಹ ಎಂದೇ ಹೇಳಲಾಗುವ ಮಾರಿಷಸ್‌ನ ಹೆಸರಾಂತ ನಾಯಕರಾದ ಶಿವಸಾಗರ್ ರಾಮ್‌ಗುಲಾಮ್ ಅವರ ಹೆಸರಿಗೆ ಮರುನಾಮಕರಣ ಮಾಡಲಾಗಿದೆ. ನಮ್ಮ ಮುಂದಿನ ಸ್ಥಳ 300 ಎಕರೆ ಜಾಗದಲ್ಲಿ ಹರಡಿರುವ ವಿಶಾಲವಾದ ಡೊಮೈನೆ ಲೆ ಪೀ ನೇಚರ್ ಗಾರ್ಡನ್. ಒಂದು ಚಿಕ್ಕ ರೈಲಿನ ರೀತಿಯ ವಾಹನದ ಮೂಲಕ ನಾವು ಈ ನೇಚರ್ ಪಾರ್ಕ್‌ನ ಆನಂದಕರ ಪ್ರವಾಸ ಮಾಡುತ್ತೇವೆ. ಈ ಸುಂದರ ನೇಚರ್ ಪಾರ್ಕ್‌ನ ಪ್ರವಾಸ, ಮಾರಿಷಸ್‌ನ ಸಾಂಪ್ರದಾಯಿಕ ಸೆಗಾ ನೃತ್ಯದ ಮೂಲಕ ಸ್ಮರಣೀಯವಾಗುತ್ತದೆ. ನಂತರ ನಾವು ಲಾ ಸೀಟಾಡೆಲೆ ಅಂದರೆ ಫೋರ್ಟ್ ಅಡಿಲೇಡ್‌ಗೆ ಬರುತ್ತೇವೆ. ಈ ಫೋರ್ಟ್‌ನಿಂದ ನಾವು ಪೋರ್ಟ್ ಲೂಯಿಸ್‌ನ ಸುಂದರ ದೃಶ್ಯವನ್ನು ನೋಡಬಹುದು. ನಂತರ ನಾವು ಪೋರ್ಟ್ ಲೂಯಿಸ್ ನಗರದ ಪ್ರವಾಸ ಮಾಡುತ್ತೇವೆ. ಇದರಲ್ಲಿ ನಾವು ಮುಗಿದ ಫ್ರೆಂಚ್ ಆಡಳಿತದ ನೆನಪನ್ನು ಹೊಂದಿರುವ ಚರ್ಚ್, ಹೈಕೋರ್ಟ್ ಕಟ್ಟಡ, ಮಸೀದಿ, ಪೋರ್ಟ್ ಲೂಯಿಸ್ ರಂಗಮಂದಿರ ಮತ್ತು ಇತರ ಕಟ್ಟಡಗಳನ್ನು ನೋಡಬಹುದು.

ಮಾರಿಷಸ್ ರೀತಿಯ ದ್ವೀಪಕ್ಕೆ ಪ್ರವಾಸ ಮಾಡುವ ಪ್ರತಿ ಪ್ರವಾಸಿಗನ ಮುಖ್ಯ ಉದ್ದೇಶವೆಂದರೆ ಅಲ್ಲಿಯ ಸುಂದರ




ಸಮುದ್ರತೀರಗಳ ಅದ್ಭುತತೆಯನ್ನು ಅನುಭವಿಸುವುದು. ಈ ಸ್ವಚ್ಛ ಮತ್ತು ರಮಣೀಯ ಸಮುದ್ರತೀರಗಳ ಸಂತೋಷವನ್ನು ಸವಿಯಲು ನಾವು ರಾಯಲ್ ಆಕ್ಸ್ ಸರ್ಫ್ ದ್ವೀಪಕ್ಕೆ ಒಂದು ಚಿಕ್ಕ ಪ್ರವಾಸ ಮಾಡುತ್ತೇವೆ. ಈ ಪ್ರವಾಸವನ್ನು ನಾವು ಸ್ಪೀಡ್‌ಬೋಟ್‌ನಲ್ಲಿ ಮಾಡುತ್ತೇವೆ. ಅದ್ಭುತವಾದ ಪ್ಯಾರಾಸೈಲಿಂಗ್ ಮತ್ತು ಈಜಿನ ಜೊತೆ ನೀವು ಅವಿಸ್ಮರಣೀಯವಾದ ಸಮುದ್ರದ ತಳದ ನಡಿಗೆಯ ಅನುಭವವನ್ನೂ ಹೊಂದಬಹುದು. ಪ್ರವಾಸದ ನಾಲ್ಕನೇ ದಿನ ಮಾರಿಷಸ್‌ನಲ್ಲಿರುವ ಪ್ರಖ್ಯಾತವಾದ ಕ್ಯಾಸೆಲಾ ಬರ್ಡ್ ಪಾರ್ಕ್‌ಗೆ ಹೋಗಬಹುದು. ಪ್ರಪಂಚದ ಐದು ಖಂಡಗಳ ವಿವಿಧ ರೀತಿಯ ಪಕ್ಷಿಗಳ ಜೊತೆ ನೀವು ವಿವಿಧ ರೀತಿಯ ಕೋತಿಗಳು ಮತ್ತು ಆಮೆಗಳನ್ನು ಇಲ್ಲಿ ನೋಡಬಹುದು. ಪಕ್ಷಿಗಳನ್ನು ನೋಡುವ ಅದ್ಭುತ ಅನುಭವದ ನಂತರ ನಿಮಗೆ ನಿಮ್ಮ ಇಷ್ಟದ ವಸ್ತುಗಳನ್ನು ಖರೀದಿ ಮಾಡಲು ಬೇಕಾದಷ್ಟು ಸಮಯ ದೊರಕುತ್ತದೆ. ಈ ಪ್ರವಾಸದ ಐದನೇ ದಿನವನ್ನು ಪ್ರವಾಸಿಗರು ಅವರ ಇಷ್ಟದ ಪ್ರಕಾರ ಈ ದ್ವೀಪದೇಶದ ಸೌಂದರ್ಯವನ್ನು ಸವಿಯಲು, ಉದ್ದೇಶವಶಾತ್ ಖಾಲಿ ಬಿಡಲಾಗಿದೆ. ಈ ದಿನ ನೀವು ವಿಶ್ರಾಂತಿ ತೆಗೆದುಕೊಳ್ಳಬಹುದು ಅಥವಾ ಮಾರಿಷಸ್ ಸಮುದ್ರತೀರಗಳಲ್ಲಿ ಪ್ರಶಾಂತವಾಗಿ ನಡೆಯಬಹುದು ಅಥವಾ ಗಾಜಿನ ತಳದ ದೋಣಿಯ ಮೂಲಕ ಸಮುದ್ರದ ತಳದಲ್ಲಿರುವ ಪ್ರಕೃತಿಯ ಅದ್ಭುತ ರಚನೆಯಾದ ಹವಳಗಳನ್ನು ನೋಡಬಹುದು. ಮರುದಿನ ನಾವು ಮಾರಿಷಸ್‌ನ ದಕ್ಷಿಣ ಭಾಗಗಳಿಗೆ ಭೇಟಿ ಕೊಡುತ್ತೇವೆ. ಮಾಡೆಲ್ ಹಡಗಿನ ಕಾರ್ಖಾನೆಯಲ್ಲಿ ವಿವಿಧ ರೀತಿಯ ಹಡಗಿನ ಮಾದರಿಯನ್ನು ನೋಡಬಹುದು. ಟ್ರೌ ಆಕ್ಸ್ ಸೆರ್ಫ್ಸ್ ಎನ್ನುವ ಅಗ್ನಿಪರ್ವತದ ಕಣಿವೆಗೆ ಭೇಟಿ ಕೊಡುವ ಮೂಲಕ ಮಾರಿಷಸ್‌ನ ಪ್ರಕೃತಿಯ ಅದ್ಭುತತೆಯನ್ನು ತಿಳಿಯಬಹುದು. ನಂತರ ನಾವು ಸುಂದರ ನಗರವಾದ ಕುರೆಪಿಪೆಗೆ ಭೇಟಿ ಕೊಡುತ್ತೇವೆ. ನಂತರ ಗ್ರಾಂಡ್ ಬೇಸಿನ್ ಅಥವಾ ಗಂಗಾ ಸರೋವರಕ್ಕೆ ತಲುಪುತ್ತೇವೆ. ಈ ಸರೋವರದಲ್ಲಿರುವ 108 ಅಡಿಯ ಎತ್ತರದ ಶಿವನ ವಿಗ್ರಹ, ನಮ್ಮ ದೇಶವಾದ ಭಾರತದ ಯಾವುದೋ ಪವಿತ್ರ ಯಾತ್ರಾಸ್ಥಳದಲ್ಲಿರುವ ಅನುಭವ ಕೊಡುತ್ತದೆ. ಈ ಸರೋವರದ ಪ್ರವಾಸದ ನಂತರ ನಾವು ನಮ್ಮ ಹಿಂತಿರುಗುವ ಪ್ರಯಾಣ ಆರಂಭಿಸುತ್ತೇವೆ.

ಕೇಸರಿ, ವಿಶೇಷವಾಗಿ ಬೆಂಗಳೂರಿನ ಜನರಿಗಾಗಿ ಅಕ್ಟೋಬರ್ 23ಕ್ಕೆ ಈ ಪ್ರವಾಸವನ್ನು ಆರಂಭಿಸಿದೆ. ಆದ್ದರಿಂದ ಶೀಘ್ರವಾಗಿ ಬನ್ನಿ. ಹೆಚ್ಚಿನ ಮಾಹಿತಿಗೆ ನಮ್ಮ ವೆಬ್‌ಸೈಟ್ www.kesari.in-ಗೆ ಭೇಟಿ ಕೊಡಿ.

## ಕುಟುಂಬದ ರಜಾದಿನಗಳು – ಸೀಸನ್ 2

**31 ಆಗಸ್ಟ್ ತನಕ ರಿಯಾಯಿತಿ**

ಕೆಲವು ಪ್ರವಾಸಗಳು ಈಗಾಗಲೇ ಭರ್ತಿಯಾಗಿವೆ. ನಿಮ್ಮ ಸ್ಥಳವನ್ನು ಬೇಗ ನಿಗದಿ ಮಾಡಿ.

KESARI
World Class Travel Company



| ಕೋಡ್ | ಪ್ರವಾಸದ ಹೆಸರು | ದಿನಗಳು | ಆರಂಭ |
|---|---|---|---|
| QT | ಥೈಲ್ಯಾಂಡ್ | 5 | 10 ಸೆಪ್ಟೆಂಬರ್ |
| Q8 | ಸಿಂಗಪೂರ್ ಮಲೇಷಿಯಾ | 6 | 23 ಸೆಪ್ಟೆಂಬರ್ |
| Q3 | ಸಿಂಗಪೂರ್ ಥೈಲ್ಯಾಂಡ್ ಮಲೇಷಿಯಾ | 8 | 29 ಸೆಪ್ಟೆಂಬರ್ |
| Q2 | ಸಿಂಗಪೂರ್ ಥೈಲ್ಯಾಂಡ್ ಮಲೇಷಿಯಾ | 10 | 28 ಸೆಪ್ಟೆಂಬರ್ |
| MK | ಶ್ರೀಲಂಕ | 6 | 25 ಸೆಪ್ಟೆಂಬರ್ |

*T&C apply. Advt.

Bengaluru 4128 2222 • www.kesari.in • sales@kesari.in • Toll free 1800 22 1100